**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

ಸಿಸಿ 1910/2022 ಚಾಸಾ-1 ಫ್ರಾಸಾ-1

ದಿನಾಂಕಃ- 29-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ.ವೈಎಂಎಂ ವಕೀಲರಿಂದಃ-**

ಎರಡು ಕೀಗಳನ್ನು ಬಳಸದೇ ಬ್ಯಾಂಕ್ ನ ಲಾಕರ್ ನ್ನು ತೆರೆಯಲು ಸಾಧ್ಯವಿಲ್ಲ ಎಂದರೆ ಸರಿ. ಹಾಜರಾತಿ ಪುಸ್ತಕದಲ್ಲಿ ಗೈರು ಹಾಜರಾದವರ ಬಗ್ಗೆ ನಮೂದು ಮಾಡುತ್ತೇವೆ ಮತ್ತು ಯಾರಿಗೆ ಕೆಲಸ ತೋರಿಸಲಾಗುತ್ತದೆಯೋ ಅವರ ಹೆಸರನ್ನು ನಮೂದು ಮಾಡುತ್ತೇವೆ. ಯಾವ ವೇಳೆಯಲ್ಲಿ ಕೆಲಸಗಾರರು ಗೈರು ಹಾಜರಾಗುತ್ತಾರೋ ಆ ಬಗ್ಗೆ ನಮೂದು ಆಗುತ್ತದೆ. ದೂರನ್ನು ನಾನೇ ಬರೆದಿರುತ್ತೇನೆ. ದೂರಿನಲ್ಲಿ ಬರೆದಿರುವ ವಿಚಾರಗಳು ಎಲ್ಲಾ ನನಗೆ ಗೊತ್ತಿರುತ್ತದೆ. ಕಿರಣ್ ರವರು ಆ ದಿನ ಕೆಲಸಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-11 ದಾಖಲೆಯನ್ನು ಸಾಕ್ಷಿಗೆ ತೋರಿಸಿದ್ದು ದಿ 02-06-2021 ರಂದು ನಮ್ಮ ಬ್ಯಾಂಕಿಗೆ ಹಾಜರೇ ಆಗಿರಲಿಲ್ಲ ಎಂದರೆ ಸಾಕ್ಷಿಯು ಅವರು ಆ ದಿನ ರಜಾದಲ್ಲಿ ಇದ್ದರೂ ಸಹ ಬ್ಯಾಂಕಿಗೇ ಬಂದಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನನ್ನ ಹಾಜರಾತಿ ಪುಸ್ತಕದ ಪ್ರಕಾರ ಕಿರಣ್ ಕುಮಾರ್ ರವರು ದಿ 18-05-2021 ರಿಂದ ದಿ 05-06-2021 ರವರೆಗೆ ಗೈರು ಹಾಜರಾಗಿರುತ್ತಾರೆಂದರೆ ಸಾಕ್ಷಿ ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಕೆಲಸಗಾರರು ವಾರಕ್ಕೆ ಒಂದು ಬಾರಿ ಕೆಲಸಕ್ಕೆ ಹಾಜರಾಗುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆ ಬಗ್ಗೆ ನಮ್ಮ ದಾಖಲೆಯಲ್ಲಿ ತೋರಿಸಿರುವುದಿಲ್ಲ. ಅವರು ಗೈರು ಹಾಜರಾಗಿದ್ದರೂ ಸಹ ದೂರಿನಲ್ಲಿ ಅವರ ಹೆಸರನ್ನು ತೋರಿಸಿರುತ್ತೆವೆಂದರೆ ಸರಿಯಲ್ಲ. ದಿ 02-06-2021 ರ ಮಧ್ಯಾಹ್ನ ಶಿವಶಂಕರ್ ರವರು ರಜಾದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆಂದರೆ ಸರಿಯಲ್ಲ. ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೋ ಅವರು ಕಡ್ಡಾಯವಾಗಿ ಚಿನ್ನವನ್ನು ಲಾಕರ್ ಒಳಗೆ ಇಡಬೇಕು, ಆದ ಕಾರಣದಿಂದ ಅವರ ಮೇಲೆ ದೂರು ನೀಡಿರುತ್ತೇನೆ. ಉಮಾರಾಣಿ ರವರು ಆ ದಿನ ಬ್ಯಾಂಕ್ ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಆ ದಿನ ಕೆಲಸಕ್ಕೆ ಹಾಜರಾಗದ ಕಾರಣ ಅವರು ಯಾವುದೇ ಅಪರಾಧವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸಿಸಿ ಟಿವಿ ಫೂಟೇಜ್ ಮತ್ತು ಇತರ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ. ನಿಪಿ-12 ರ ಬರಹಗಳನ್ನು ನಮ್ಮ ಸಿಬ್ಬಂದಿಯವರು ಬರೆದಿರುತ್ತಾರೆ, ಆದ ಕಾರಣ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಆ ದಾಖಲೆಯಲ್ಲಿ ಕ್ರಮಬದ್ಧವಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ಆನ್ ಲೈನ್ ಸಿಸ್ಟಮ್ ನಲ್ಲಿರುವ ದಾಖಲೆಯನ್ನೇ ನಾವು

ಬರೆದಿರುತ್ತೇವೆ. ಆನ್ ಲೈನ್ ನಲ್ಲಿ ಇರುವ ಮಾಹಿತಿಯನ್ನು ತಿದ್ದುಪಡಿ ಮಾಡಲು ಮತ್ತು ನಮೂದು ಮಾಡಲು ಬರುವುದಿಲ್ಲ, ಅದು ನೇರವಾಗಿ ಬರುತ್ತದೆ. ನಿಪಿ-13 ರಲ್ಲಿ ಕೆಲವು ದಿನಗಳವರೆಗೆ ಕೀಯನ್ನು ಬದಲಾಯಿಸಿಲ್ಲ ಎಂದರೆ ಸರಿ. ಈ ರಿಜಿಸ್ಟರ್ ನಲ್ಲಿ ದಿ 05-06-2021 ರಂದು ಯಾರು ಕೀಯನ್ನು ಪಡೆದಿರುತ್ತಾರೆಂದು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಮಾಡಿರುತ್ತೇವೆಂದರೆ ಸರಿಯಲ್ಲ. ನಿಪಿ-13 ನ್ನು ನಾವು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ದಾಖಲೆಯಲ್ಲಿ ಗೈರು ಹಾಜರಿ ಎಂದು ತೋರಿಸಿರುವ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ. ನಿಪಿ-14 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಆಡಿಟ್ ವರದಿಯಲ್ಲಿ ಯಾವ ಯಾವ ಚಿನ್ನಗಳನ್ನು ಲೆಕ್ಕಕ್ಕೆ ತೋರಿಸಿಲ್ಲ ಎಂಬ ವರದಿಯಾಗಿರುತ್ತದೆ. ಆಡಿಟ್ ಮಾಡುವವರ ಸಹಿ ಮತ್ತು ಸೀಲ್ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ಮಾಡಿರುವ ಅವ್ಯವಹಾರವನ್ನು ಮರೆಮಾಚಲು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-15 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ಆರೋಪಿಯು ಯಾವುದೇ ಹಣವನ್ನು ದುರುಪಯೋಗ ಮಾಡಿಕೊಳ್ಳದೇ ಇದ್ದರೂ ಸುಳ್ಳು ಪ್ರಕರಣವನ್ನು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ